## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 215
ಸದಸ್ಯರ ಹೆಸರು : ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 12-07-2018
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಸರ್ಕಾರವು ಖಾಸಗಿ ಲಾಭಿಗೆ ಮಣಿದು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮುಚ್ಚುತ್ತಿರುವುದು ನಿಜವೇ;</td><td>ಇಲ್ಲ</td></tr>
<tr><td>ಆ.</td><td>ಕಳೆದ ನಾಲ್ಕು ವರ್ಷಗಳಲ್ಲಿ ಮುಚ್ಚಲಾದ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;</td><td>ಯಾವುದೇ ಕಾಲೇಜುಗಳನ್ನು ಮುಚ್ಚಿರುವುದಿಲ್ಲ. ಆದರೆ, ಕಡಿಮೆ ದಾಖಲಾತಿ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಅಗತ್ಯವಿರುವ ಕಡೆಗೆ ಸ್ಥಳಾಂತರಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ-<br>1. ಸರ್ಕಾರದ ಆದೇಶ ಸಂಖ್ಯೆ:ಇಡಿ 502 ಎಸ್‌ಹೆಚ್‌ಹೆಚ್ 2016 ದಿನಾಂಕ:16-02-2017ರಲ್ಲಿ ಪ್ರಥಮ ಪಿಯುಸಿಗೆ ಕಡಿಮೆ/ಶೂನ್ಯ ದಾಖಲಾತಿ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಾದ ನಾಗತಿ ಬಸಾಪುರ, ಹದಗಳಿ ಹೋಬಳಿ, ಬಳ್ಳಾರಿ ಜಿಲ್ಲೆ ಹಾಗೂ ಕೆಂಬಾಳು, ಹಾಸನ ಜಿಲ್ಲೆ ಇವುಗಳನ್ನು ಪದವಿ ಪೂರ್ವ ಕಾಲೇಜುಗಳ ಅಗತ್ಯತೆ ಇರುವ ಕೆ.ಆರ್.ಪುರಂ, ಬೆಂಗಳೂರು ಮತ್ತು ರಂಗೇನಹಳ್ಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಲಾಗಿದೆ.<br>2. ಸರ್ಕಾರದ ಆದೇಶ ಸಂಖ್ಯೆ:ಇಡಿ 502 ಎಸ್‌ಹೆಚ್‌ಹೆಚ್ 2016 ದಿನಾಂಕ:20-05-2017ರಲ್ಲಿ ಕಡಿಮೆ ದಾಖಲಾತಿ ಇರುವ ಒಟ್ಟು 14 ಪದವಿ ಪೂರ್ವ ಕಾಲೇಜುಗಳನ್ನು ಅಗತ್ಯವಿರುವ ಕಡೆಗೆ ಸ್ಥಳಾಂತರಿಸಿ, 2017-18ನೇ ಸಾಲಿನಿಂದ ಪ್ರಾರಂಭಿಸಲು ಆದೇಶಿಸಲಾಗಿದೆ. ನಂತರದಲ್ಲಿ ಸದರಿ ಸ್ಥಳಾಂತರಗೊಂಡ 14 ಪದವಿ ಪೂರ್ವ ಕಾಲೇಜುಗಳಲ್ಲಿ 06 ಪದವಿ ಪೂರ್ವ ಕಾಲೇಜುಗಳನ್ನು ಮೂಲಸ್ಥಳದಲ್ಲಿಯೇ ಮುಂದುವರೆಸಲಾಗಿದೆ.</td></tr>
<tr><td>ಇ.</td><td>ಹೊಸ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ನಿಯಮ ಮತ್ತು ಮಾರ್ಗಸೂಚಿಗಳೇನು;(ಪ್ರತಿ ಒದಗಿಸುವುದು)</td><td>ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 30 ಮತ್ತು 31ರನ್ವಯ ಹಾಗೂ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರೆ) ನಿಯಮಗಳು, 2006ರ ನಿಯಮ 4ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 634 ಎಸ್‌ಹೆಚ್‌ಹೆಚ್ 2017 ದಿನಾಂಕ:24-01-2018ರನ್ವಯ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.<br>ಪ್ರತಿಗಳನ್ನು ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3ರಲ್ಲಿ ಒದಗಿಸಿದೆ.</td></tr>
<tr><td>ಈ.</td><td>ಕಳೆದ ನಾಲ್ಕು ವರ್ಷದಲ್ಲಿ ಹೊಸದಾಗಿ ಪ್ರಾರಂಭಿಸಿರುವ ಖಾಸಗಿ ಪದವಿ ಪೂರ್ವ ಕಾಲೇಜಗಳ ಸಂಖ್ಯೆ ಎಷ್ಟು;</td><td>ಕಳೆದ ನಾಲ್ಕು ವರ್ಷಗಳಲ್ಲಿ ಹೊಸದಾಗಿ ಪ್ರಾರಂಭಿಸಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ವರ್ಷಾವಾರು ಈ ಕೆಳಕಂಡಂತಿದೆ-
<table>
<tr><th>ಕ್ರಮ ಸಂಖ್ಯೆ</th><th>ಶೈಕ್ಷಣಿಕ ವರ್ಷ</th><th>ಕಾಲೇಜುಗಳ ಸಂಖ್ಯೆ</th></tr>
<tr><td>1.</td><td>2014-15</td><td>210</td></tr>
<tr><td>2.</td><td>2015-16</td><td>266</td></tr>
<tr><td>3.</td><td>2016-17</td><td>221</td></tr>
<tr><td>4.</td><td>2017-18</td><td>161</td></tr>
<tr><td></td><td>ಒಟ್ಟು</td><td>858</td></tr>
</table></td></tr>
</table>

| | | |
|---|---|---|
| ಉ. | ನಿಯಮ ಮೀರಿ ಪದವಿ ಪೂರ್ವ ಕಾಲೇಜಗಳನ್ನು ಹೊಸದಾಗಿ ಪ್ರಾರಂಭಿಸಲು ಅನುಮತಿ ನೀಡಿರುವುದು ನಿಜವೇ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರೆ) ನಿಯಮಗಳು, 2006ರ ನಿಯಮ 4ರನ್ವಯ ತಪಾಸಣಾ ಸಮಿತಿಯ ವರದಿ ಮತ್ತು ನಿರ್ದೇಶಕರ ಪ್ರಸ್ತಾವನೆಯನ್ನು ಪರಿಗಣಿಸಿ, ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಬಗ್ಗೆ ಖಚಿತಪಡಿಸಿಕೊಂಡು ಮಾನ್ಯತೆ ನೀಡಲು ಷರತ್ತು ವಿಧಿಸಿ, ಮಂಜೂರಾತಿ ನೀಡಲಾಗಿದೆ. ಮಂಜೂರಾತಿ ನೀಡಲಾಗಿರುವ ಪ್ರಕರಣಗಳಲ್ಲಿ ಷರತ್ತುಗಳನ್ನು ಪಾಲಿಸಿರುವ ಸಂಸ್ಥೆಗಳಿಗೆ ಮಾತ್ರ ನಿರ್ದೇಶಕರಿಂದ ಶೈಕ್ಷಣಿಕ ಮಾನ್ಯತೆ ನೀಡಿ ಕಾಲೇಜು ಪ್ರಾರಂಭಿಸಲು ಅನುಮತಿ ನೀಡಲಾಗುತ್ತದೆ. |

ಸಂಖ್ಯೆ: ಇಡಿ 180 ಡಿಜಿಡಬ್ಲ್ಯೂ 2018

(ಎನ್.ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

(a) state institutions, that is to say, educational institutions established or maintained and administered by State Government;

(b) local authority institutions, that is to say, educational institutions established or maintained and administered by a local authority; and

(c) private educational institutions, that is to say, educational institutions established or maintained and administered by any person or body of persons registered in the manner prescribed.

**30. Educational institutions to be registered.**—(1) Save as otherwise provided in this Act, every local authority institution and every private educational institution, established on or before the date of commencement of this Act or intended to be established thereafter, shall notwithstanding anything contained in any other law for the time being in force, be registered in accordance with this Act and the rules made thereunder.

(2) No person or local authority shall establish or as the case may be, run or maintain an educational institution requiring registration under this section, unless such institution is so registered.

**31. Procedure for registration of Educational Institutions.**—(1) Any local authority or any person or registered body of persons intending to.—

(a) establish an institution imparting education, or

(b) maintain an institution imparting education established on or before the date of commencement of this Act and in existence on such date,

shall make an application for registration of such institution to the registering authority within such period and in such manner along with such fee as may be prescribed.

(2) While registering an institution under sub-section (1), the registering authority shall have due regard to the following matters, namely.—

(a) that there is need for providing educational facilities to the people in the locality or for the type of education intended to be provided by the institution;

(b) that there is adequate financial provision for continued and efficient maintenance of the institution as prescribed by the competent authority;

(c) that the institution is proposed to be located in a sanitary and healthy surroundings;

(d) that the site for the building, playground and garden proposed to be provided and the building in which the institution is proposed to be housed conform to the rules prescribed therefor;

(e) that the teaching staff qualified according to rules made by the State Government in this behalf, is or shall be appointed; and

(f) that the application satisfies the requirements laid down by this Act and the rules and orders made thereunder.

(3) The registering authority shall within a period of three months from the date of receipt of the application.—

(a) register the institution and issue a certificate in the prescribed form, if the conditions specified or prescribed for registration have been complied with; or

(b) specify or extend from time to time, the period for compliance with such conditions:

Provided that the registering authority, may if it deems necessary, obtain and consider a report on the need for such institution from the expert body constituted under Section 37 before granting or refusing the registration.

(4) Where any period is specified or extended under clause (b) of sub-section (3), the registering authority may register the institution if the conditions prescribed or specified for registration have been fulfilled within such period and issue a certificate in the prescribed form but shall refuse registration where there has been no such compliance. Every order of refusal shall disclose the grounds for such refusal and shall be in writing and shall be communicated to the concerned applicant.

(5) The Governing Council of an educational institution registered under this section shall give intimation to the registering authority of any change in any of the particulars furnished under sub-section (1) or of closure of the institution in such form, in such manner and within such time as may be prescribed and the registering authority shall, on receipt of such intimation, amend the register and the registration certificate wherever necessary or, as the case may be, cancel the certificate.

32. Upgradation of Educational Institutions, *etc.*—(1) Any local authority or any person or registered body of persons intending to.—

(a) open higher classes in an institution registered under this Act imparting education; or

(b) upgrade any such institution,

may make an application to the registering authority for grant of permission therefor within such period and in such form accompanied by such fee as may be prescribed.

KA/BG-GPO/2515/MPP-47/2006-2008

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ



| ಭಾಗ - IVA | ಬೆಂಗಳೂರು, ಶನಿವಾರ, ಜುಲೈ ೦೭, ೨೦೦೭ (ಆಷಾಢ ೧೬, ಶಕ ವರ್ಷ ೧೯೨೯) | ಸಂ: ೧೦೯೩ |
|---|---|---|



## Education Secretariat.

## Notification

No. ED 136 TPU 1999, Bangalore, Dated 9th October, 2006

The draft of the following rules which the Government of Karnataka proposes to make in exercise of the powers conferred by section 145 of the Karnataka Education Act, 1983 (Karnataka Act 1 of 1995) is hereby published in Notification No. ED 136 TPU 99, dated 09-10-2006 part-IV A No. 1334 of the Karnataka Gazette ex-ordinary dated 09-10-2006. Inviting objections and suggestions from the persons likely to be affected thereby.

And whereas the said gazette was made available to the public on 09th October 2006.

And whereas the objections and suggestions received in this regard have been duly considered by the state government.

Now therefore in exercise of the powers conferred by sub-section(1) of section 145 of the Karnataka Education Act, 1983

(Karnataka Act 1 of 1995), the Government of Karnataka hereby makes the following Rules, namely:-

## CHAPTER I

### Preliminary

1. Title and commencement.- (1) These rules may be called the Karnataka Pre-University Education (Academic, Registration, Administration and Grant-in-aid etc.) Rules, 2006.

(2) They shall come into force from the date of their publication in the official Gazette.

2. Definitions.- In these rules, unless the context otherwise requires,-

(1) 'Act' means, the Karnataka Education Act, 1983 (Karnataka Act 1 of 1995);

(2) 'Aided College' means, a recognised private Pre-University college or a Pre-University college run by a local authority getting grant-in-aid partly or wholly from the Government;

(3) 'Department' means the Department of Pre-University Education in Karnataka;

(4) 'Director', 'Joint Director', 'Deputy Director' and 'Assistant Director' shall mean respectively the 'Director of Pre-University Education in Karnataka', 'Joint Director of Pre-University Education', 'Deputy Director of Pre-University Education' and 'Assistant Director of Pre-University Education';

(5) 'Form' means a Form appended to these rules;

(6) 'Government Pre-University college' means a college established, and administered or maintained by the State Government, but does not include a private college whose management has been taken over for a limited period for the purpose of better management;

(7) 'Inspection Committee' means a committee comprising of the Senior most Principal of Government Pre-University College, who shall act as the chairperson and a Senior Principal of an aided College nominated by Deputy Director of whom one shall belong to Science faculty;

(8) 'Optional subjects' means any combination of four subjects specified in Schedule-I;

(9) "Pre-University College" means recognised college or an educational institution imparting education for students who are appearing for I year and II year Pre-University examination conducted by the Department of Pre-University Education;

(10) 'Private Un-aided Pre-University College' means a recognised Pre-University College run by a private managing committee, which does not get grant-in-aid partly or wholly from the State Government;

(11) "Private aided Pre-University College" means a recognised Pre-University College run by a private managing committee which gets grant-in-aid partly or wholly from the State Government;

(12) "Schedule" means Schedule appended to these rules;

(13) 'Section' means, unless it refers specifically to a section in a college, a section of the Act;

(14) 'Student strength' means the aggregate of the number of students who would have actually appeared and written the II Pre-University examination in a subject in a college in the three consecutive annual examinations proceeding the relevant year, increased by ten percent:

Provided that the 'student strength' in the first year Pre-University Class of admission in a new college shall be computed by actual head count of the students who have produced their SSLC or 10th standard pass certificates and transfer certificates and present during the working hours in a class room when such head count is taken;

(15) 'Subject' means a subject of study specified in Schedule-II and taught in a Pre-University college in accordance with the syllabus as may be specified by the department by notification.

## CHPATER II

### Classification and procedure for

### Establishment of Private Pre-University Colleges.

3. Classification of Pre-University colleges.- (1) The Pre-University colleges shall be classified as, Government Pre-University colleges, Local Authority Pre-University college, Private aided Pre-University and Private unaided Pre-University colleges.

(2) The private aided and unaided Pre-University colleges which are functioning on the date of commencement of these rules shall further be categorised into following groups, namely:-

(a) Category A: Pre-University college with own land and building as specified in rule 4 and with full supplement of teaching and non-teaching staff as specified in sub-rule (8) of rule 4.

(b) Category B: Pre-University college with own land and building but not with sufficient land and building as required under rule 4 and with full strength of teaching and non-teaching staff as specified in sub-rule (8) of rule 4.

(c) Category C: Pre-University college without own land and located in an unsuitable insufficient building but with full strength of teaching and non-teaching staff as specified in sub-rule (8) of rule 4.

4. Procedure for establishing a new Private Pre-University college.- (1) A registered Managing Committee which is intending to establish a Pre-University college shall intimate its intention to do so to the Director, in Form- I along with a fee of Rs. 500.00 The Director shall record such intimation in a register kept in Form II and thereafter issue a letter of intent to the managing committee within thirty days from the date of intimation from the managing committee.

(2) Upon receipt of the letter of intent, the managing committee intending to establish a Pre-University college shall,-

(a) Within one year from the date of letter of intent, acquire a minimum of 25,000 Sq. ft. of land on which it intends to construct the college building including the principal's chambers, class rooms, library etc;

(b) within three years from the date of letter of intent construct on the said land a building with the following facilities and rooms which shall have a corridor or a veranda of at least 8 ft. width abutting the entrance to the room, namely:-

(i) Principal's chamber with a minimum plinth area of 250 sq. ft.,

(ii) Office room with a minimum plinth area of 250 sq. ft.,

(iii) Staff room with a minimum plinth area of 500 sq. ft.,

(iv) Waiting room with a minimum plinth area of 500 sq. ft for the girls with attached toilets for simultaneous use by 10 persons with sufficient water storage facilities,

(v) Toilets for boys with facility for simultaneous use by 10 persons,

(vi) Library with a minimum plinth area of 1000 sq. ft.,

(vii) Reading room with a minimum plinth area of 1000 sq. ft.,

(viii) At least 6 lecture halls, each measuring at least 22 ft. x 30 ft.;

(ix) Bicycle stand with a provision for parking minimum 100 bicycles at a time;

(x) If science subjects are taught, then three laboratories, one for Physics, one for Chemistry and one for Biology and if Electronics or Computer science subjects are taught separate laboratories for these subjects with a minimum plinth area of 24 ft. x 60 ft. each;

(c) Provide water, electricity and sanitary facilities in the laboratories, class rooms, office rooms and toilets making the building fit for running a Pre-University college;

(d) Provide desks, benches, tables, office furniture, shelves, office equipments, apparatus and equipment in the laboratories.

(3) The minimum requirements specified in sub-rule (2), are meant for six sections and where language subjects in Part-I are only two. For every additional language subject in Part-I, one lecture hall and for every additional subject in Part-II, two lecture halls shall be provided.

(4) The managing committee shall after complying with the requirements of sub-rules (2) and (3), intimate in writing to the Director the fact that they have acquired the necessary land, constructed the building and provided the basic facilities and civil amenities, etc., as required under sub-rule (2) and also specify the combinations of subjects which they intended to teach.

(5) The Director shall record such intimation in the register kept for the purpose and shall within the next thirty days request the Inspection Committee to visit the place of the intended location of the Pre-University college and hold inspection.

(6) The Inspection Committee shall within thirty days thereafter inspect the land and building and submit its report to the State Government through the Director giving specific findings in respect of compliance of the specifications of this rule.

(7) The managing committee shall furnish an undertaking to the Director in respect of the land and building acquired and built as contemplated under this rule in the proforma specified in Form-III to these rules and shall deposit of an amount of Rs.1,00,000/- in a scheduled bank or a post office branch in the name of the Director of Pre-University Education in Karnataka.

(8) After satisfying that the managing committee has complied with the requirements of sub-rules (2) and sub-rule (7), the State Government shall cause the Director to register the Pre-University college in the register maintained in accordance with section 31, and shall within one month from the date of undertaking under sub-rule (7), authorise the Managing Committee to recruit the minimum teaching and non-teaching personnel, as follows:-

(i) one principal;

(ii) one lecturer for each subject permitted to be taught including the subject taught by the principal;

(iii) one clerk, one peon and where science subjects are to be taught, one laboratory attender.

(9) The managing committee shall recruit the minimum teaching and non-teaching staff specified under sub-rule (8) within three months from the date of issue of such an authorisation.

(10) The Director shall accord recognition to the Pre-University college only after it has been registered in accordance with the sub-rule (8) and that the managing committee has

-- ಅನುಬಂಧ - 3

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಇಡಿ 634 ಎಸ್‌ಹೆಚ್‌ಹೆಚ್ 2017 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24-01-2018.

<u>ಅಧಿಸೂಚನೆ</u>

ವಿಷಯ:- 2018-19ನೇ ಸಾಲಿನಲ್ಲಿ ಹೊಸದಾಗಿ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಶಾಶ್ವತ ಅನುದಾನರಹಿತವಾಗಿ ಪ್ರಾರಂಭಿಸಲು ನೋಂದಾಯಿತ ಅರ್ಹ ಸಂಸ್ಥೆಗಳಿಂದ ಅರ್ಜಿಯನ್ನು ಆಹ್ವಾನಿಸುವ ಬಗ್ಗೆ.

ಓದಲಾಗಿದೆ:- 1. ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 30 ಮತ್ತು 31
2. ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997
3. ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) ನಿಯಮಗಳು, 2006
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 09 ಪಿಜಿಸಿ 2017 ದಿನಾಂಕ 07-01-2017

---

2018-19ನೇ ಸಾಲಿನಲ್ಲಿ ಹೊಸದಾಗಿ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಶಾಶ್ವತ ಅನುದಾನರಹಿತವಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಅರ್ಹ ನೋಂದಾಯಿತ ಸಂಸ್ಥೆಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಇಲಾಖಾ ವೆಬ್‌ಸೈಟ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ವೆಬ್‌ಸೈಟ್ ವಿಳಾಸ: www.pue.kar.nic.in

1) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999, ದಿನಾಂಕ:09-10-2006ರನ್ವಯ ಜಾರಿಯಾಗಿರುವ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಅನುದಾನ ಇತ್ಯಾದಿ) ನಿಯಮಗಳು 2006, ಈ ನಿಯಮಗಳ ನಿಯಮ 4(2) ಮತ್ತು 4(3) ರಂತೆ ಕೆಳಕಂಡ ಕ್ರಮಗಳನ್ನು ಅನುಸರಿಸುವುದು:

ಅ) ಸಂಸ್ಥೆ / ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2)(ಅ) ರಂತೆ ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿಯೇ (ಪ್ರತ್ಯೇಕವಾಗಿ) 25000 (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಹೊಂದಿರಬೇಕು ಹಾಗೂ ನಿಯಮ 4(2)ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರಾಂಶುಪಾಲರ ಕೊಠಡಿ, ಕಚೇರಿ ಕೊಠಡಿ, ಸಿಬ್ಬಂದಿಕೊಠಡಿ, ಬೋಧನಾ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯಗಳು, ಶೌಚಾಲಯ, ಸೈಕಲ್ ಸ್ಟ್ಯಾಂಡ್, ಆಟದ ಮೈದಾನ ಹಾಗೂ ನೀರಿನ ಸೌಲಭ್ಯ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ಸುಸಜ್ಜಿತ ಕಟ್ಟಡವನ್ನು ಹೊಂದಿರತಕ್ಕದ್ದು.

2. ಸದರಿ ನಿವೇಶನವು ಸಂಸ್ಥೆಯ/ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿದ್ದು, ಸಂಸ್ಥೆಯ ಅಧ್ಯಕ್ಷರ / ಕಾರ್ಯದರ್ಶಿಯ ಪದನಾಮದಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ನಿಯಮಗಳ ಅನ್ವಯ ನೋಂದಣಿಯಾಗಿರಬೇಕು.

3. ನಿವೇಶನ / ಕಟ್ಟಡವನ್ನು ಬಾಡಿಗೆಗೆ ಪಡೆದು ಪದವಿ ಪೂರ್ವ ಕಾಲೇಜನ್ನು ನಡೆಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

4. Letter of intent ಪಡೆದ 03 (ಮೂರು) ವರ್ಷದೊಳಗೆ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ನಿಯಮ 4(4) ರಂತೆ ಅವಧಿಯನ್ನು ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ನೀಡಿರುವ Letter of intentನ್ನು ನಿಯಮ 4(12) ರಂತೆ ರದ್ದುಗೊಳಿಸಲಾಗುವುದು. Letter of intent ಮೂರು ವರ್ಷಗಳ ನಂತರ ತನ್ನ ಸಿಂಧುತ್ವವನ್ನು / ಮಾನ್ಯತೆಯನ್ನು ಕಳೆದುಕೊಳ್ಳುವುದರಿಂದ ಮೂರು ವರ್ಷಗಳೊಳಗೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ಮುಂದಿನ ವರ್ಷಗಳಲ್ಲಿ ಪುನಃ ಹೊಸದಾಗಿ ಅರ್ಜಿ ಶುಲ್ಕವನ್ನು ಸ್ವೀಕರಿಸಲಾಗುವುದು ಮಾಡಿ ಅರ್ಜಿ ಸಲ್ಲಿಸಬೇಕಾಗುತ್ತದೆ.

5. ಒಂದು ವೇಳೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮ 4(2) ಮತ್ತು 4(3) ರಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದಲ್ಲಿ, ನಿಯಮ 4(4) ರಂತೆ ಅಗತ್ಯ ಮಾಹಿತಿ ಮತ್ತು ದಾಖಲೆಗಳೊಂದಿಗೆ ವೇಳಾಪಟ್ಟಿಗೆ ಅನುಗುಣವಾಗಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

2) ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಬಹು ಮುಖ್ಯವಾಗಿ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

1. ಸಂಸ್ಥೆ / ಟ್ರಸ್ಟ್ ಅಧಿಕೃತವಾಗಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು.

2. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರಬಾರದು. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಯಾವುದೇ ರೀತಿಯ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ನೀಡಿರಬಾರದು. ಸಂಸ್ಥೆಯನ್ನು ಟ್ರಸ್ಟ್ ಆಗಿ ಅಥವಾ ಟ್ರಸ್ಟನ್ನು ಸಂಸ್ಥೆಯಾಗಿ ನಿಯಮಬಾಹಿರವಾಗಿ ಪರಿವರ್ತಿಸಿರಬಾರದು. ಈ ಬಗ್ಗೆ ಸಂಸ್ಥೆ/ಟ್ರಸ್ಟ್‌ನ ಸಕ್ಷಮ ಪ್ರಾಧಿಕಾರಿಯು ರೂ.200/-ರ ಇ-ಸ್ಟಾಂಪ್ ಪೇಪರ್‌ನಲ್ಲಿ ನೋಟರಿ ದೃಢೀಕೃತ ಅಫಿಡವಿಟ್ (ಪ್ರಮಾಣ ಪತ್ರ) ಸಲ್ಲಿಸತಕ್ಕದ್ದು.

3. ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಪ್ರಸ್ತುತ ಸಾಲಿನವರೆಗೆ ನವೀಕರಣಗೊಂಡಿರಬೇಕು. ಸಕ್ಷಮ ಪ್ರಾಧಿಕಾರವು ದೃಢೀಕರಿಸಿರುವ ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರ ದೃಢೀಕೃತ ಪಟ್ಟಿಯನ್ನು ಹೊಂದಿರಬೇಕು.

4. ಸಂಸ್ಥೆಯ ಬೈಲಾದಲ್ಲಿರುವಂತೆ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಿರಬೇಕು.

5. ಸಂಸ್ಥೆ / ಟ್ರಸ್ಟ್ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮಗಳನ್ವಯ ರೂ.28.80 ಲಕ್ಷಗಳ ಸ್ಥಿರ ಮತ್ತು ಚರ ಆಸ್ತಿಯನ್ನು ಹೊಂದಿರಬೇಕು.

6. ಸಂಸ್ಥೆ / ಟ್ರಸ್ಟ್‌ನ ಆಡಿಟನ್ನು ನಿಯಮಾನುಸಾರ ಪ್ರಸ್ತುತ ಸಾಲಿನವರೆಗೆ ಮಾಡಿಸಿರಬೇಕು.

7. ಸಂಸ್ಥೆ / ಟ್ರಸ್ಟ್ ತನ್ನ ಸ್ವಾಧೀನಾನುಭವದಲ್ಲಿ ಕನಿಷ್ಠ 25000 (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿ ಹೊಂದಿರಬೇಕು.

8. ಸದರಿ 25000 ಚದರ ಅಡಿಗಳ ನಿವೇಶನ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಅಧ್ಯಕ್ಷರು / ಚೇರ್‌ಮನ್ / ಕಾರ್ಯದರ್ಶಿಯವರ ಪದನಾಮದಲ್ಲಿ ಇರಬೇಕು. ಈ ಸ್ಥಿರ ಆಸ್ತಿಯು ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಇರಬಾರದು.

9. ಕಟ್ಟಡವು ಆಡಳಿತ ಮಂಡಳಿಯ ಸ್ವಂತದ್ದಾಗಿರದೆ ಭೋಗ್ಯಕ್ಕೆ ಪಡೆದಿದ್ದಲ್ಲಿ, ಭೋಗ್ಯದ ಕರಾರನ್ನು ಕನಿಷ್ಠ 30 ವರ್ಷಗಳ ಅವಧಿಗೆ ಮಾಡಿರಬೇಕು. ಸದರಿ ಕರಾರನ್ನು 30 ವರ್ಷಗಳು ಪೂರ್ಣಗೊಳ್ಳುವ ಮುನ್ನ ರದ್ದುಪಡಿಸಲು ಅಥವಾ ತಿದ್ದುಪಡಿ ಮಾಡಲು ಅವಕಾಶವಿಲ್ಲದಂತೆ ಕರಾರು ಒಪ್ಪಂದವಾಗಿರಬೇಕು. ಈ ಕರಾರು ಒಪ್ಪಂದವನ್ನು ನಿಗದಿತ ಮೊತ್ತದ ಇ-ಸ್ಟಾಂಪ್ ಪೇಪರ್‌ನಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿರಬೇಕು. ಹಾಗೂ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿಗೆ ವರ್ಗಾವಣೆಯಾಗಿರಬೇಕು.

10. ನೋಟರಿಯವರ ಸಮ್ಮುಖದಲ್ಲಿ ಸತ್ಯಾಪನ ಮಾಡಿರುವ ಕರಾರು ಪತ್ರಗಳಿಗೆ ನಿಯಮಗಳನ್ವಯ ಮಾನ್ಯತೆ ಇರುವುದಿಲ್ಲ. ಬಾಡಿಗೆ ಕರಾರಿನ ಮೇಲೆ ಪಡೆದಿರುವ ನಿವೇಶನ / ಕಟ್ಟಡವನ್ನು ಸಂಸ್ಥೆ / ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿರುವ ನಿವೇಶನ / ಕಟ್ಟಡ ಎಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ.

11. ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ / ಕಟ್ಟಡವು ನಿಯಮ 4ರನ್ವಯ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು.

12. ಸರ್ಕಾರಿ ಪದವಿ ಪೂರ್ವ ಕಾಲೇಜು ಇರುವ 3 ಕಿಲೋಮೀಟರ್ ಅಂತರದಲ್ಲಿ ಯಾವುದೇ ಹೊಸ ಅನುದಾನರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅನುಮತಿ ನೀಡಬಾರದು.

13. ಈಗಾಗಲೇ ಅನುದಾನಸಹಿತ, ಅನುದಾನರಹಿತ ಕಾಲೇಜುಗಳಿದ್ದಲ್ಲಿ ಅಂತಹ ಸ್ಥಳದಲ್ಲಿ ಹೊಸ ಅನುದಾನರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬಾರದು ಇದರ ಅಂತರವು ಸಹ 3 ಕಿಲೋ ಮೀಟರ್ ಆಗಿರಬೇಕು.

3) ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸುವ ಪ್ರಸ್ತಾವನೆಯು ನಿಯಮ 4(2), 4(3) ಮತ್ತು 4(4)ಕ್ಕೆ ಅನುಗುಣವಾಗಿ ಇಲ್ಲದಿದ್ದಲ್ಲಿ ಸ್ಥಳ ಪರಿಶೀಲನೆಗಾಗಿ ತಪಾಸಣಾ ಸಮಿತಿಗೆ ಸೂಚನೆ ನೀಡಲಾಗುವುದಿಲ್ಲ, ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆನ್ನುವ ಅಂತಹ ಪ್ರಸ್ತಾವನೆಗಳನ್ನು ನಿರ್ದೇಶಕರ ಕಛೇರಿಯ ಹಂತದಲ್ಲಿಯೇ ಸಂಸ್ಥೆಯ ಕೋರಿಕೆಯನ್ನು ತಿರಸ್ಕರಿಸಲಾಗುವುದು.

2018-19ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ

| ಕ್ರ | ಘಟನಾವಳಿಗಳ ವಿವರ | ದಿನಾಂಕ |
|---|---|---|
| 1 | ಅರ್ಹ ಟ್ರಸ್ಟ್ / ಸಂಸ್ಥೆಯ ಆಡಳಿತ ಮಂಡಳಿಗಳು ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಶುಲ್ಕ ರೂ. 36,000/- ದೊಂದಿಗೆ ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕಡೆಯ ದಿನಾಂಕ (Form-I ರಲ್ಲಿ) – (ನಿಯಮ- 4 ರಂತೆ). | 31-01-2018 |

| | | |
|---|---|---|
| 2 | ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಹಾಗೂ ರಿಜಿಸ್ಟರ್‌ನಲ್ಲಿ ನೋಂದಾಯಿಸಲ್ಪಟ್ಟ ಟ್ರಸ್ಟ್ / ಸೊಸೈಟಿಗಳಿಗೆ ನಿರ್ದೇಶನಾಲಯದಿಂದ Letter of intent ನೀಡಲು ಕೊನೆಯ ದಿನಾಂಕ | 06-02-2018 |
| 3 | ನಿರ್ದೇಶನಾಲಯವು ನೀಡಿರುವ Letter of intentಗೆ ಆಡಳಿತ ಮಂಡಳಿಯವರು 2018-19ನೇ ಶೈಕ್ಷಣಿಕ ಸಾಲಿನಲ್ಲಿಯೇ ಖಾಸಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ನಿಯಮ 4ರಂತೆ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ನಿಗದಿತ ನಮೂನೆಯೊಂದಿಗೆ ಪ್ರಸ್ತಾವನೆಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 20-02-2018 |
| 4 | ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ವರದಿ ಸಲ್ಲಿಸುವ ಕೊನೆಯ ದಿನಾಂಕ<br>1) ನಿರ್ದೇಶನ ನೀಡಿದ 15 ದಿನಗಳ ಒಳಗಾಗಿ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ಸಮಿತಿಯು ವರದಿಯನ್ನು ದಾಖಲೆಗಳೊಂದಿಗೆ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು.<br>2) ತಪಾಸಣಾ ಸಮಿತಿಯು ನೀಡುವ ವರದಿಯನ್ನು ಜಿಲ್ಲಾ ಉಪ ನಿರ್ದೇಶಕರು ಮುಂದಿನ 05 ದಿನಗಳ ಒಳಗಾಗಿ ನಿರ್ದೇಶನಾಲಯಕ್ಕೆ ತಲುಪಿಸುವುದು. | 17-03-2018 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೇಖರ) [illegible]/18

ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪದವಿ ಪೂರ್ವ ಶಿಕ್ಷಣ)

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ನಿರ್ದೇಶನಾಲಯ, ವಿಕಾಸಸೌಧ, ಬೆಂಗಳೂರು ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ ಪ್ರಕಟಿತ 100 ಪ್ರತಿಗಳನ್ನು ಒದಗಿಸಲು.

ಪ್ರತಿ:-

1. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
2. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು(ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಮೂಲಕ).
3. ಶಾಖಾ ರಕ್ಷಾ ಕಡತ /ಹೆಚ್ಚಿನ ಪ್ರತಿಗಳು.